ದಿಃ 25.06.2025

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ,
ಹೊಳಲ್ಕೆರೆ.

ಸಿ ಸಿ ನಂಃ 1390/2024

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | : | ತಿಪ್ಪೇಶ್ | ಪಿ.ಡಬ್ಲ್ಯೂ | : | 1 |
| ತಂದೆಯ ಹೆಸರು | : | ದೇವಲಾ ನಾಯ್ಕ | ಸಿ.ಡಬ್ಲ್ಯೂ. | : | 2 |
| ವಯಸ್ಸು | : | 29 ವರ್ಷ | ದಿನಾಂಕ | : | 25.06.2025 |
| ಉದ್ಯೋಗ | : | ವ್ಯವಸಾಯ | | | |
| ವಾಸಸ್ಥಳ | : | ಲಂಬಾಣಿ ಹಟ್ಟಿ | | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ

ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತಿಲ್ಲ. ಚಾಸಾ–**1** ನನ್ನ ಪರಿಚಯಸ್ಥ, ಚಾಸಾ–**3, 4** ಮತ್ತು **9** ನನಗೆ ಗೊತ್ತಿಲ್ಲ.

ಸಾಕ್ಷಿಗೆ ಈ ಹಂತದಲ್ಲಿ ಒಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯು ದಿಃ**17.04.2023** ರಂದು ಪಂಚರಾದ ನಮಗೆ ನೀಡಿದ ನೋಟೀಸ್ ಆಗಿದ್ದು, ಸದರಿ ದಾಖಲೆಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ–**1** ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–**1**(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈ ಹಂತದಲ್ಲಿ ಇನ್ನೊಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯು ದಿಃ**17.04.2023** ರಂದು ಪಂಚರಾದ ನಮಗೆ ನೀಡಿದ ಶೋಧನ ಸಮುಚಿತ ವಾರೆಂಟ್ ಆಗಿದ್ದು, ಸದರಿ ದಾಖಲೆಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ–**2** ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–**2**(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈ ಹಂತದಲ್ಲಿ ಇನ್ನೊಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯು ದಿಃ**17.04.2023** ರಂದು ವಶಪಡಿಸಿಕೊಂಡ ಸ್ವತ್ತಿನ ಪಟ್ಟಿಯಾಗಿದ್ದು, ಸದರಿ ದಾಖಲೆಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ–**3** ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–**3**(ಎ) ಎಂದು ಗುರುತಿಸಲಾಯಿತು.

ದಿಃ 25.06.2025

ಸಾಕ್ಷಿಗೆ ಈ ಹಂತದಲ್ಲಿ ಇನ್ನೊಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯು ದಿಃ**17.04.2023** ರಂದು ತಯಾರಿಸಿದ ಮಾದರಿ ಮೊಹರಿನ ನಕಲಾಗಿದ್ದು, ಸದರಿ ದಾಖಲೆಯನ್ನು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ**–4** ಮತ್ತು ನಿಪಿ**–4**(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈ ಹಂತದಲ್ಲಿ ಇನ್ನೊಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯು ಸ್ಥಳದ ಪಂಚನಾಮೆಯಾಗಿದ್ದು, ಸದರಿ ದಾಖಲೆಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ**–5** ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ**–5**(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ಮುದ್ದೆ ಮಾಲಿನ ಮೇಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಎಂ.ಓ**–1** ಮತ್ತು **2** ಎಂದು ಮತ್ತು ಸಾಕ್ಷಿಯ ಸಹಿಯನ್ನು ಎಂ.ಓ.**1**(ಎ) ಮತ್ತು ಎಂ.ಓ.**2**(ಎ) ಎಂದು ಗುರುತಿಸಲಾಯಿತು.

ನಿಪಿ–1 ರಿಂದ 5 ಮತ್ತು ಎಂ.ಓ.1 ಕ್ಕೆ ಈಗ್ಗೆ ಸುಮಾರು 1 ವರ್ಷಗಳ ಹಿಂದೆ ಅಬಕಾರಿ ಪೊಲೀಸ್ ಠಾಣೆಯಲ್ಲಿ ಅಬಕಾರಿ ಪೊಲೀಸ್ ಠಾಣೆಯ ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮ ಸದರಿ ನಿಪಿ–2 ರಿಂದ 5 ಮತ್ತು ಎಂ.ಓ.1 ಕ್ಕೆ ಚಾಸಾ–1 ರವರು ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ. ನಿಪಿ.5 ರಲ್ಲಿ ಏನು ಬರೆದಿದೆ ಎಂಬುದು ನನಗೆ ಗೊತ್ತಿಲ್ಲ ಮತ್ತು ಪೊಲೀಸರು ನನಗೆ ಓದಿ ಹೇಳಿಲ್ಲ ಮತ್ತು ಪೊಲೀಸರು ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯು ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಮಾನ್ಯ ಸ.ಸ.ಅ ರವರಿಂದಃ</u>

ದಿ:17.04.2023 ರಂದು ಸಂಜೆ 04.00 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ–1 ರವರು ಲಂಬಾಣಿ ಹಟ್ಟಿ ಗ್ರಾಮದ ಕ್ರಾಸ್ ಬಳಿ ನಿಂತಿದ್ದಾಗ ಚಾಸಾ–6 ರವರು ಅಲ್ಲಿಗೆ ಬಂದು ತಮ್ಮನ್ನು ಪರಿಚಯ ಮಾಡಿಕೊಂಡರು ಎಂದರೆ ಸರಿಯಲ್ಲ. ನಂತರ ಚಾಸಾ–6 ರವರು ನಮ್ಮ

ದಿಃ 25.06.2025

ಗ್ರಾಮದ ವಿಮಲಾಬಾಯಿ ಗಂಡ ಮೋಹನ್.ಎಸ್ ಎಂಬುವವರ ತನ್ನ ಮನೆಯಲ್ಲಿ ಅಕ್ರಮವಾಗಿ ಮಧ್ಯವನ್ನು ಸಂಗ್ರಹಿಸಿಟ್ಟು ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿದೆ ಎಂದು ನಮಗೆ ತಿಳಿಸಿದರು ಎಂದರೆ ಸರಿಯಲ್ಲ. ನಂತರ ಚಾಸಾ–6 ರವರು ನಮಗೆ ಸದರಿ ಮನೆಯನ್ನು ಶೋಧ ನೆಡೆಸಬೇಕು ಎಂದು ತಿಳಿಸಿ ನಾವು ಒಪ್ಪಿದ ಮೇರೆಗೆ ನಿಪಿ–1 ರಂತೆ ನೋಟೀಸ್ ಅನ್ನು ನಮಗೆ ಜಾರಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಾನು ಮತ್ತು ಚಾಸಾ–1, 3 ರಿಂದ 6 ರವರು ಸದರಿ ಮಾಹಿತಿ ಬಂದ ಸ್ಥಳಕ್ಕೆ ಹೋದೆವು ಎಂದರೆ ಸರಿಯಲ್ಲ. ಅಬಕಾರಿ ಅಧಿಕಾರಿಗಳು ತಮ್ಮ ವಾಹನವನ್ನು ಆರೋಪಿಯ ಮನೆಯ ಹತ್ತಿರ ನಿಲ್ಲಿಸಿ ನಿಂತು ನೋಡಿದಾಗ ಆರೋಪಿಯು ನಮ್ಮನ್ನು ಕಂಡು ಓಡಿ ಪರಾರಿಯಾಗಿರುತ್ತಾಳೆ ಎಂದರೆ ಸರಿಯಲ್ಲ. ನಂತರ ಅಧಿಕಾರಿಗಳು ಅನುಮಾನ ಬಂದು ಮನೆಯ ಬಾಗಿಲ ಹತ್ತಿರ ಹೋಗಿ ಯಾರಾದರೂ ಇದ್ದೀರಾ ಎಂದು ಕೇಳಲಾಗಿ ಯಾರೂ ಇಲ್ಲದಿರುವುದು ಕಂಡು ಬಂದಿತ್ತು ಎಂದರೆ ಸರಿಯಲ್ಲ. ನಂತರ ಸದರಿ ಸ್ಥಳದಲ್ಲಿ ನಿಪಿ–2 ಕ್ಕೆ ನಮ್ಮ ಸಹಿ ಪಡೆದರು ಎಂದರೆ ಸರಿಯಲ್ಲ. ನಂತರ ಸದರಿ ಸ್ಥಳದಲ್ಲಿ ಅಬಕಾರಿ ಅಧಿಕಾರಿ ನಾನು, ಚಾಸಾ–1,3 ರಿಂದ 6 ರವರು ಪರಸ್ಪರ ಅಂಗಶೋಧನೆ ಮಾಡಿಕೊಂಡ ನಂತರ ಅಧಿಕಾರಿಗಳು ಸದರಿ ಮನೆಯನ್ನು ಪರಿಶೀಲನೆ ಮಾಡಿದರು ಎಂದರೆ ಸರಿಯಲ್ಲ. ಮನೆಯ ಒಳಗೆ ಪ್ರವೇಶಿಸಿ ನೋಡಿದಾಗ ಹಾಲ್ ನ ಎಡಭಾಗದ ಟೇಬಲ್ ನ ಕೆಳಗೆ ಮೂರು ರಟ್ಟಿನ ಪೆಟ್ಟಿಗೆಗಳು ಮತ್ತು ಒಂದು ಬಿಳಿ ಚೀಲ ಇರುವುದು ಕಂಡು ಬಂದಿತ್ತು ಎಂದರೆ ಸರಿಯಲ್ಲ. ನಂತರ ಅಧಿಕಾರಿಗಳು ರಟ್ಟಿನ ಪೆಟ್ಟಿಗೆಯನ್ನು ಹೊರ ತೆಗೆದು ನೋಡಿದಾಗ ರಾಜಾ ವಿಸ್ಕಿಯ 90 ಮಿಲಿಯ 2 ಶೀಲ್ಡ್ ಬಾಕ್ಸ್ ಗಳು ಹಾಗೂ ಓಸಿ ವಿಸ್ಕಿಯ 90 ಮಿಲಿಯ ಒಂದು ಶೀಲ್ಡ್ ಬಾಕ್ಸ್ ಹಾಗೂ ಬಿಳಿ ಚೀಲವನ್ನು ನೋಡಲಾಗಿ 0.500 ಮಿಲಿಯ ಪವರ್ ಕೂಲ್ ಬಿಯರ್ ನ 24 ಟನ್ ಗಳು ಇರುವುದು ಕಂಡು ಬಂದಿದ್ದು ಅವುಗಳಲ್ಲಿ ಒಟ್ಟು 25.920 ಲೀಟರ್ ಅಕ್ರಮ ಮಧ್ಯ ಇರುವುದು ಕಂಡು ಬಂದಿತ್ತು ಎಂದರೆ ಸರಿಯಲ್ಲ. ನಂತರ ಅಧಿಕಾರಿಗಳು ಅಕ್ಕ ಪಕ್ಕದ ಮನೆಯವರನ್ನು ವಿಚಾರಿಸಿದಾಗ ಓಡಿ ಹೋದ ಮಹಿಳೆಯ ಹೆಸರು ವಿಮಲಾಬಾಯಿ ಕೋ ಮೋಹನ್ ಎಂದು ತಿಳಿಸಿದ್ದರು ಎಂದರೆ ಸರಿಯಲ್ಲ. ನಂತರ ನಮ್ಮ ಸಮಕ್ಷಮ ಎಲ್ಲಾ ಮಧ್ಯವನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅಕ್ಕಪಕ್ಕದ ಮನೆಯವನ್ನು ವಿಚಾರಿಸಿದಾಗ ಆರೋಪಿ ಮಧ್ಯವನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಉದ್ದೇಶದಿಂದ ಸಂಗ್ರಹಿಸಿರುವುದಾಗಿ ತಿಳಿಸಿದರು ಎಂದರೆ ಸರಿಯಲ್ಲ. ನಂತರ ಸದರಿ ಮಧ್ಯಕ್ಕೆ ಸಂಬಂಧಿಸಿದಂತೆ ಪರವಾನಿಗೆಯನ್ನು ಇದೆಯೇ ಎಂದು ಸದರಿ ವ್ಯಕ್ತಿಯನ್ನು ವಿಚಾರಿಸಿದಾಗ

ದಿಃ 25.06.2025

ಆರೋಪಿಯು ಸರ್ಕಾರದಿಂದ ಯಾವುದೇ ಪರವಾನಿಗೆ ಪಡೆದಿರುವುದಿಲ್ಲ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಚಾಸಾ–6 ರವರು ಸರ್ಕಾರದ ಪರವಾನಿಗೆ ಇಲ್ಲದೇ ಮಧ್ಯ ಸಂಗ್ರಹಿಸಿಡುವುದು ಅಪರಾಧ ಎಂದು ತಿಳಿಸಿದರು ಎಂದರೆ ಸರಿಯಲ್ಲ. ಸದರಿ ಮಧ್ಯವನ್ನು ಪ್ರತ್ಯೇಕವಾಗಿ ಬಿಳಿ ಬಟ್ಟೆಯಲ್ಲಿ ಸುತ್ತಿ ದಾರದಿಂದ ಕಟ್ಟಿ ಅರಗಿನಿಂದ ಸೀಲ್ ಮಾಡಿ ಎಲ್ಲಾ ಮಧ್ಯವನ್ನು ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸುವ ಸಲುವಾಗಿ ನಿಪಿ–5 ರಂತೆ ಅದೇ ದಿನ ಸಂಜೆ 05.00 ರಿಂದ 06.00 ರವರೆಗೆ ಅಬಕಾರಿ ಪೊಲೀಸರು ನನ್ನ ಮತ್ತು ಚಾಸಾ–1 ರವರ ಸಮಕ್ಷಮ ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ13.08.2024 ರಂದು ಈ ಮೇಲೆ ಹೇಳಿದಂತೆ ನಿಪಿ–6 ರಂತೆ ಚಾಸಾ–10 ರವರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಆ ದಿನ ಆರೋಪಿಯ ಮನೆಯಿಂದ ವಶದಿಂದ ವಶಪಡಿಸಿಕೊಂಡ ಮತ್ತು ರಾಸಾಯನಿಕ ಪರೀಕ್ಷೆಗೆ ಕಳುಹಿಸಿದ ರಾಜಾ ವಿಸ್ಕಿಯ 90 ಮಿಲಿಯ 2 ಶೀಲ್ಡ್ ಬಾಕ್ಸ್ ಗಳು ಹಾಗೂ ಓಸಿ ವಿಸ್ಕಿಯ 90 ಮಿಲಿಯ ಒಂದು ಶೀಲ್ಡ್ ಬಾಕ್ಸ್ ಹಾಗೂ ಬಿಳಿ ಚೀಲವನ್ನು ನೋಡಲಾಗಿ 0.500 ಮಿಲಿಯ ಪವರ್ ಕೂಲ್ ಬಿಯರ್ ನ 24 ಟನ್ ಗಳು ನ್ಯಾಯಾಲಯದ ಮುಂದೆ ಇರುವ ಟೇಟ್ರಾ ಪ್ಯಾಕೆಟ್ ಗಳೇ ಆಗಿರುತ್ತವೆ ಎಂದರೆ ಸರಿಯಲ್ಲ.

ನ್ಯಾಯಾಲಯದ ಮುಂದಿರುವ ಎಂ.ಓ.1 ಮತ್ತು 2 ನ್ನು ನನ್ನ ಮತ್ತು ಚಾಸಾ–1 ರವರ ಸಮಕ್ಷಮ ನಿಪಿ–5 ರಂತೆ ಮಹಜರ್ ನಂತೆ ಸದರಿ ಸ್ಥಳದಲ್ಲಿ ವಶಪಡಿಸಿಕೊಂಡರು ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನನಗೆ ಎಲ್ಲಾ ಮಾಹಿತಿ ಇದ್ದರೂ ಸಹಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು: ಆರೋಪಿತರ ಪರವಾಗಿ : ಇರುವುದಿಲ್ಲ</u>

ಮರು ವಿಚಾರಣೆ :ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚುಪಡಿಸಿದೆ)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ದಿಃ 25.06.2025

ಜೆಎಂಎಫ್‌ಸಿ, ಹೊಳಲ್ಕೆರೆ.